# ಬಾಲ ಸೂರ್ಯ

■ ಸೋಮಲಿಂಗ ಬೇಡರ

ಕಲೆ: ಸಂತೋಷ್ ಸಸಿಹಿತ್ಲು

ಮುದ್ದು ಕಂದ ನಿದ್ರೆ ತೊರೆದು
ಎದ್ದು ಬಾರೊ ಹೊರಗೆ
ಬಾಲ ಸೂರ್ಯ ಮೂಡುತಿಹನು
ನೋಡು ಬಾರೊ ಬೇಗನೆ

ಅದೋ ನೋಡು ಪೂರ್ವದಲ್ಲಿ
ರವಿಯ ಕಿರಣ ಲೀಲೆ
ತೊಡಿಸುತಿಹವು ಕೂಡಿ ಹೆಣೆದು
ರವಿಗೆ ಮೇಘ ಮಾಲೆ

ಇಳೆಗೆ ಬೆಳಕು ಹರಿಸಲೆಂದು
ಬರುತಲಿಹನು ದಿನಪ
ಎಂಥ ಸೊಗಸು ಏನು ಚಂದ
ಅವನ ಮೈಯ ಹೊಳಪ

ಧರೆಯ ಕಣ್ಣು ತೆರೆಸಲೆಂದು
ಸರಿಸಿ ಇರುಳ ಸೆರಗ
ಬೆಳ್ಳಿ ಬೆಳಕು ಮೆಲ್ಲ ಹರಡಿ
ಮಾಡುತಿಹನು ಬೆಳಗ

ಗೂಡಿನೊಳಗೆ ಬಿದ್ದ ಬೆಳಕು
ಸೋಕಿ ಹಕ್ಕಿಪಕ್ಕಿ
ನಿದ್ರೆಗಣ್ಣು ಬಿಟ್ಟು ಹೊರಗೆ
ಬರುತಲಿಹವು ಹಿಗ್ಗಿ

ನೋಡಬೇಕು ಕಂದ ದಿನವು
ಬಾಲ ರವಿಯ ವದನ
ಕಟ್ಟಬಹುದು ನೀನು ಕೂಡ
ರವಿಯ ಬಗ್ಗೆ ಕವನ



## ಕುಂಚ ಪ್ರಪಂಚ

'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in





**ಧಾತ್ರಿ ಎಚ್.**
1ನೇ ತರಗತಿ,
ಶ್ರೀ ಸತ್ಯ ಸಾಯಿ
ಲೋಕ ಸೇವಾ
ಪ್ರಾಥಮಿಕ ಶಾಲೆ
ಅಳಿಕೆ, ದ.ಕ. ಜಿಲ್ಲೆ





**ಸಿರಿ ಸಿ.ಎನ್.**
7ನೇ ತರಗತಿ,
ಸಂತ. ಚಾರ್ಲ್ಸ್ ಇಂಗ್ಲಿಷ್
ಶಾಲೆ, ಭದ್ರಾವತಿ





**ತನ್ವಿ ಕೆ.**
1ನೇ ತರಗತಿ,
ಶ್ರೀ ಕುಮಾರನ್ ಪಬ್ಲಿಕ್
ಶಾಲೆ, ಬೆಂಗಳೂರು





**ಶ್ರೇಯಾ ಎಸ್. ಗಾಯಕ್ವಾಡ್**
4ನೇ ತರಗತಿ, ಡ್ರೀಮ್
ವರ್ಲ್ಡ್ ಶಾಲೆ, ಬಳ್ಳಾರಿ